ಎ) ಕಂಡಿಕೆ 'ಎ' ರಲ್ಲಿ ವಿವರಿಸಿದಂತೆ ಗುತ್ತಿಗೆ ಕರಾರಿನ ನಿಯಮಗಳನ್ವಯ ಗುತ್ತಿಗೆದಾರರ ಮೇಲೆ ಕ್ರಮ ಕೈಗೊಳ್ಳಲಾಗುವುದು

1444 (2060) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) – ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ ಬೀದರ್ ಜಿಲ್ಲೆಯಲ್ಲಿ ಎಷ್ಟು ಕುಡಿಯುವ ನೀರಿನ ಕಾಮಗಾರಿಗಳಿಗೆ ಅನುಮೋದನೆ ದೊರೆತಿದೆ,

ಆ) ಔರಾದ್ ಪಟ್ಟಣದಲ್ಲಿ ತೀವ್ರವಾದ ಕುಡಿಯುವ ನೀರಿನ ಅಭಾವವಿದ್ದು ಇಲ್ಲಿಗೆ ಶಾಶ್ವತವಾಗಿ ಮಾಂಜ್ರಾ ನದಿಯಿಂದ ಪೈಪ್ ಲೈನ್ ಮೂಲಕ ನೀರು ಸರಬರಾಜು ಮಾಡುವ ಬಗ್ಗೆ ಕೆ ಯು ಡಬ್ಲ್ಯೂ ಎಸ್ ಬಿ ಯಾವಾಗ ಸರ್ವೆ ಕಾರ್ಯ ಮುಗಿಸಿದೆ,

ಇ) ಇದಕ್ಕಾಗಿ ಇಲ್ಲಿಯವರೆಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ ಹಾಗೂ ಈ ಕಾಮಗಾರಿ ಪ್ರಾರಂಭಿಸಲಾಗಿದೆಯೇ, ಒಂದು ವೇಳೆ ಪ್ರಾರಂಭ ಮಾಡದೆ ಇದ್ದಲ್ಲಿ ಕಾರಣಗಳೇನು,

ಈ) ಔರಾದ್ ಪಟ್ಟಣದಲ್ಲಿ ಬೇಸಿಗೆಯ ಸಮಯದಲ್ಲಿ ತೀವ್ರವಾದ ಕುಡಿಯುವ ನೀರಿನ ಅಭಾವ ಉಂಟಾಗಿರುವುದರಿಂದ ಸರ್ಕಾರವು ಪ್ರಾಧಾನ್ಯತೆಯ ಮೇಲೆ ಇಲ್ಲಿಗೆ ಮಾಂಜ್ರಾ ನದಿಯಿಂದ ಕುಡಿಯುವ ನೀರಿನ ಸರಬರಾಜು ಕಾಮಗಾರಿಯನ್ನು ಆದಷ್ಟು ಶೀಘ್ರವಾಗಿ ಪ್ರಾರಂಭಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿ)

ಅ) ಬೀದರ್ ಜಿಲ್ಲೆಯ 4 ಪಟ್ಟಣಗಳಿಗೆ ಕುಡಿಯುವ ನೀರಿನ ಕಾಮಗಾರಿಗಳಿಗೆ ಅನುಮೋದನೆ ನೀಡದೆ ವಿವರಗಳು ಈ ಕೆಳಕಂಡಂತಿವೆ

1) ಬೀದರ್ ನಗರ 2) ಔರಾದ್ ಪಟ್ಟಣ

3) ಭಾಲ್ಕಿ ಪಟ್ಟಣ ಮತ್ತು 4) ಹುಮ್ನಾಬಾದ್–ಚಿಟಗುಪ್ಪ ಪಟ್ಟಣ

ಆ) ಮಾಂಜ್ರಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ನಿಟ್ಟೂರು ಬ್ಯಾರೇಜ್‌ನಿಂದ ಔರಾದ್ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರನ ಸರಬರಾಜು ಯೋಜನೆಗಾಗಿ ಪ್ರಾಥಮಿಕ ಹಂತದ ಸರ್ವೇ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ

ಇ) ವಿಸ್ತೃತ ಸರ್ವೇ ಕಾಮಗಾರಿಯನ್ನು ಕೈಗೊಳ್ಳಲು ರೂ 4 00 ಲಕ್ಷಗಳ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಅಂದಾಜು ಮೊತ್ತವನ್ನು ಮಂಡಳಿಗೆ ಭರಣಾ ಮಾಡಲು ಪಟ್ಟಣ ಪಂಚಾಯತ್ ಔರಾದ್ ಇವರಿಗೆ ಕೋರಲಾಗಿದೆ

ಈ) ಪಟ್ಟಣ ಪಂಚಾಯತಿಯ ಹಣ ಭರಣ ಮಾಡಿದ ಕೂಡಲೇ ವಿಸ್ತೃತ ಸರ್ವೇ ಕಾಮಗಾರಿಯನ್ನು ಕೈಗೊಳ್ಳಲಾಗುವುದು

1445 (2087) ಶ್ರೀ ಹಾಲಪ್ಪ ಹೆಚ್ (ಹೊಸನಗರ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯಲ್ಲಿ ವಿವಿಧ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ದಿನಗೂಲಿ ನೌಕರರ ಸಂಖ್ಯೆ ಎಷ್ಟು, (ತಾಲ್ಲೂಕಾವಾರು ವಿವರ ನೀಡುವುದು)

ಆ) ಸದರಿ ದಿನಗೂಲಿ ನೌಕರರನ್ನು ಖಾಯಂಗೊಳಿಸುವ ಉದ್ದೇಶ ಸರ್ಕಾರದ ಮುಂದಿದೆಯೇ,

ಇ) ಎಷ್ಟು ದಿನದ ಒಳಗಾಗಿ ದಿನಗೂಲಿ ನೌಕರರನ್ನು ಖಾಯಂ ಗೊಳಿಸಲಾಗುವುದು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿ) –

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ

ಆ) ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 8307–11/83 ರಲ್ಲಿ ದಿನಾಂಕ 23–02–1990 ರಂದು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 2 ಎಸ್‌ಎಲ್‌ಸಿ 90 ದಿನಾಂಕ 6–08–1990 ನ್ನು ಹೊರಡಿಸಲಾಗಿದ್ದು ಸದರಿ ಆದೇಶದ ಪ್ರಕಾರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಾಂಕ 1–07–1984 ರಂದು ಅಥವಾ ಅದಕ್ಕಿಂತ ಹಿಂದೆ ತೊಡಗಿಸಲಾದ ಸಾಂದರ್ಭಿಕ/ ದಿನಗೂಲಿ ಆಧಾರದ ಮೇಲೆ ಮಾಡಿರುವ ಎಲ್ಲಾ ನೇಮಕಾತಿಗಳು